ಯಾವ ಅಪರಾಧ ಮಾಡಿದನೆಂದು ಈ ಶಿಕ್ಷೆಯನ್ನು ವಿಧಿಸುತ್ತಿದ್ದೀರಾ? ನೂರಾರು ವಿಧದ ಪಾಕ ಕಲೆಯನ್ನು ತಿಳಿದುಕೊಂಡಿರುವ ಅವನೆಂದರೆ ಮಹಾರಾಜರಿಗೂ ಅಚ್ಚುಮೆಚ್ಚಾಗಿತ್ತು. ವಿನಾಕಾರಣ ಅವನಿಗೆ ಸೆರೆವಾಸ ವಿಧಿಸುವುದು ಚೆನ್ನಾಗಿರುವುದಿಲ್ಲ' ಎಂದು ಹೇಳಿದ. ಹಕ್ಕಿಯೂ ಕೋಪದಿಂದ ಹೂಂಕರಿಸಿತು. 'ರಾಜನಾಗಿರುವ ನನ್ನ ನಿರ್ಧಾರವನ್ನು ನೀನು ಪ್ರಶ್ನಿಸುವಂತಿಲ್ಲ. ನಾನು ಹೇಳಿದ್ದನ್ನು ಪಾಲಿಸುವುದು ನಿನ್ನ ಜವಾಬ್ದಾರಿ' ಎಂದು ಹೇಳಿತು.

ವಜೀರನು ಅಡುಗೆಯವನಿಗೆ ಸೆರೆವಾಸ ವಿಧಿಸಿದ. ಹಕ್ಕಿಯು ಅಲ್ಲಿಗೇ ಸುಮ್ಮನಾಗಲಿಲ್ಲ. ಸೇನಾಪತಿ, ಕೊತ್ವಾಲ, ಔಷಧ ಕೊಡುವ ಪಂಡಿತ ಎಂದು ಒಬ್ಬೊಬ್ಬರನ್ನೇ ಸೆರೆಮನೆಗೆ ಹಾಕಿಸಿತು. ಇದರಿಂದ ವಜೀರನಿಗೆ ಕಳವಳವಾಯಿತು. ಹೀಗೆಯೇ ಆದರೆ ಅರಮನೆಯಲ್ಲಿ ಅಧಿಕಾರದಲ್ಲಿರುವ ಎಲ್ಲರೂ ಸೆರೆಮನೆ ಸೇರಬೇಕಾಗುತ್ತದೆ. ಅದಕ್ಕಾಗಿ ಈ ಹಕ್ಕಿಗಳಿಗೆ ತಕ್ಕ ವ್ಯವಸ್ಥೆ ಕೈಗೊಳ್ಳಬೇಕು ಎಂದು ಯೋಚಿಸಿ ತನ್ನ ಆಪ್ತರೊಂದಿಗೆ ರಹಸ್ಯವಾಗಿ ಸಭೆ ನಡೆಸಿದ. ಹಕ್ಕಿಗಳನ್ನು ನಾಶ ಮಾಡಲು ಅವರು ಒಂದು ಉಪಾಯ ಆಲೋಚಿಸಿದರು. ಅದರ ಪ್ರಕಾರ ವಜೀರನು ಹಕ್ಕಿ ರಾಜನ ಬಳಿಗೆ ಬಂದು ನಯವಿನಯದಿಂದ ಮುಜುರೆ ಮಾಡಿದ. 'ನಮ್ಮ ಉದ್ಯಾನದಲ್ಲಿ ಘಮಘಮ ಹೂಗಳು ಅರಳುವ ಕಾಲ. ರುಚಿಕರವಾದ ಹಣ್ಣುಗಳು ಮಾಗಿವೆ. ತಾವು ತಮ್ಮ ಬಳಗದೊಂದಿಗೆ ವಿಹಾರಕ್ಕೆ ಅಲ್ಲಿಗೆ ಹೋಗಿ ಸ್ಫಟಿಕದಂತಿರುವ ತಿಳಿನೀರಿನ ಕೊಳದಲ್ಲಿ ಈಜಿ ಮನಸ್ಸನ್ನು ಅರಳಿಸಬಹುದು. ಹೂಗಳ ಸುಗಂಧವನ್ನು ಆಘ್ರಾಣಿಸಿ ಹಣ್ಣುಗಳನ್ನು ತಿಂದು ಖುಷಿಪಟ್ಟು ಬರಬಹುದು' ಎಂದು ಹೇಳಿದ.

ಹಕ್ಕಿಗಳು ಉದ್ಯಾನಕ್ಕೆ ಹೋಗಿ ನೆಲದಲ್ಲಿಳಿದ ಕೂಡಲೇ ವಜೀರನು ಅಲ್ಲಿ ಹಾಕಿಸಿದ ಬಲೆಯಲ್ಲಿ ಸಿಲುಕಿಕೊಂಡು ಒದ್ದಾಡಿದವು. ಅವುಗಳನ್ನು ಕೊಲ್ಲಲು ಹತ್ತಾರು ಸೇವಕರು ದೊಣ್ಣೆಗಳನ್ನೆತ್ತಿಕೊಂಡು ಓಡೋಡಿ ಬಂದರು. ಆಗ ರಾಜ ಹಕ್ಕಿಯು ಜೊತೆಗಾರರಿಗೆ, 'ಎಲ್ಲರೂ ಸರ್ವಶಕ್ತಿಯನ್ನೂ ಉಪಯೋಗಿಸಿ ರೆಕ್ಕೆಗಳನ್ನು ಬಿಡಿಸಿ ಹಾರಲು ಪ್ರಯತ್ನಿಸಿ. ನಮಗೆ ಇನ್ನು ಅಧಿಕಾರ ಬೇಡ. ಇದನ್ನು ನೀಡಿದ ದೊರೆಯ ಬಳಿಗೆ ಹೋಗೋಣ' ಎಂದು ಹೇಳಿತು. ಸೇವಕರು ಬಳಿಗೆ ಬರುವ ಮೊದಲೇ ಹಕ್ಕಿಗಳು ಬಲೆಯ ಸಹಿತ ಆಕಾಶಕ್ಕೇರಿ ಹಾರುತ್ತ ಪ್ರಾರ್ಥನಾ ಮಂದಿರದ ಮುಂದೆ ಕುಳಿತಿದ್ದ ದೊರೆಯ ಬಳಿಗೆ ಬಂದಿಳಿದವು. ದೊರೆ, 'ಯಾಕೆ ಬಂದಿರಿ, ಅಧಿಕಾರ ಸಾಕಾಯಿತೆ?' ಎಂದು ಕೇಳಿದ.

ದೊಡ್ಡ ಹಕ್ಕಿಯು, 'ಹೌದು ದೊರೆಯೇ, ನಿನ್ನ ರಾಜ್ಯವನ್ನು ಮರಳಿ ಸ್ವೀಕರಿಸು. ನಮಗೀಗ ಬಲೆಯಿಂದ ಬಿಡುಗಡೆಯಾಗಬೇಕಿದ್ದರೆ ನಿನ್ನ ರಾಜ್ಯದಲ್ಲಿರುವ ಪ್ರತಿಯೊಬ್ಬ ಯುವತಿಯು ಬಂದು ಬಲೆಯನ್ನು ಮುಟ್ಟಬೇಕು. ಯಾರು ಬಲೆ ಮುಟ್ಟಿದಾಗ ಅದು ತೆರೆದುಕೊಳ್ಳುತ್ತದೋ ಆ ಯುವತಿಯು ನನ್ನ ಕೈಹಿಡಿಯಬೇಕು' ಎಂದು ಹೇಳಿತು. ದೊರೆ ದೇಶದ ಎಲ್ಲ ಯುವತಿಯರನ್ನೂ ಕರೆಸಿದ. ಆದರೆ ಯಾರು ಮುಟ್ಟಿದರೂ ಬಲೆಯ ಬಾಗಿಲು ತೆರೆಯಲಿಲ್ಲ. ಕಡೆಗೆ ಉಳಿದವಳು ದೊರೆಯ ಮಗಳು. ಅವಳು ಬಂದು ಸ್ಪರ್ಶಿಸಿದ ಕೂಡಲೇ ಬಲೆ ತೆರೆಯಿತು. ಹಕ್ಕಿಗಳು ಹೊರಗೆ ಬಂದವು. ಹೇಳಿದ ಮಾತಿನಂತೆ ದೊರೆ ತನ್ನ ಮಗಳನ್ನು ಹಕ್ಕಿಯ ಕೈಗೊಪ್ಪಿಸಿದ. ಮರುಕ್ಷಣವೇ ಹಕ್ಕಿಯು ಮಾಯವಾಗಿ ಒಬ್ಬ ರಾಜಕುಮಾರ ಕಾಣಿಸಿಕೊಂಡು ಹೇಳಿದ, 'ನಾನು ನೆರೆ ದೇಶದ ಯುವರಾಜ. ಮಂತ್ರವಾದಿಗಳ ಮಾಟದಿಂದ ನನ್ನ ಗೆಳೆಯರ ಜೊತೆಗೆ ಹಕ್ಕಿಯಾದೆ. ನಿನ್ನ ಅರಮನೆಯಲ್ಲಿ ಸೇರಿಕೊಂಡ ಆ ಮಂತ್ರವಾದಿಗಳನ್ನೆಲ್ಲ ಸೆರೆಮನೆಗೆ ಸೇರಿಸಿದೆ. ನಿನ್ನ ವಜೀರ ಅವರಿಗೆ ಮುಖ್ಯಸ್ಥ. ಅವನ ಮೋಸದಿಂದ ಸಾವು ಬಂದರೂ ಪಾರಾದೆ. ನನ್ನ ಕೈಹಿಡಿಯುವ ಹುಡುಗಿ ಸ್ಪರ್ಶಿಸಿದಾಗ ಮೊದಲಿನಂತಾಗುವೆನೆಂಬ ವರ ಪಡೆದಿದ್ದೆ' ಎಂದು ರಾಜಕುಮಾರ ಹೇಳಿದ. ದೊರೆ ಎಲ್ಲ ಮಂತ್ರವಾದಿಗಳಿಗೂ ಶಿಕ್ಷೆ ವಿಧಿಸಿ ರಾಜಕುಮಾರನೊಂದಿಗೆ ಮಗಳ ವಿವಾಹ ನೆರವೇರಿಸಿದ.

(ಅರೇಬಿಯಾದ ಕತೆ)